Reg. No. | | | | | | | | | | | |

# BCAKALN 202

**II Semester B.C.A. Degree Examination, July/August 2023**
**(NEP 2020) (2022 – 2023 Batch Onwards)**
**KANNADA**
**Kannada Language (AECC)**

Time : 2 Hours Max. Marks : 60

Shri Dharmasthala Manjunatheshwara
College of Business Management Library
MANGALORE - 575 003

I. **ಎರಡು** ಪ್ರಶ್ನೆಗಳಿಗೆ ಉತ್ತರಿಸಿರಿ : **(2×8=16)**

1) ಪ್ರೀತಿಯ ಗೆಳೆಯ ಕರ್ಣನ ಉದಾತ್ತ ಗುಣಗಳು ದುರ್ಯೋಧನನಿಂದ ಹೇಗೆ ಪ್ರಕಟವಾಗಿವೆ ? ವಿಶದೀಕರಿಸಿ.

2) ಕನ್ನಡ ಭಾಷೆಯ ಬೆಳವಣಿಗೆಗೆ ಆಧುನಿಕ ತಂತ್ರಜ್ಞಾನ ಹೇಗೆ ಸಹಕಾರಿಯಾಗಿದೆ ?

3) ನೇಮಿಚಂದ್ರರ 'ಬದುಕು ಕಾಯುವುದಿಲ್ಲ' ಕಥೆಯ ಸ್ವಾರಸ್ಯವನ್ನು ವಿವರಿಸಿರಿ.

4) ಲೇಖಕರಾಗಿ, ಪರಿಸರವಾದಿಯಾಗಿ, ವೈದ್ಯರಾಗಿ ಮೊಯ್ದಿನ್‌ರವರು ನಾಡಿಗೆ ನೀಡಿದ ಕೊಡುಗೆಗಳೇನು ? ವಿವರಿಸಿರಿ.

II. **ಎರಡು** ಪ್ರಶ್ನೆಗಳಿಗೆ ಉತ್ತರಿಸಿರಿ : **(2×6=12)**

1) ಕಾಣಿಯ ಶೋಷಣೆಯ ಸ್ವರೂಪವನ್ನು ಕಥೆಗಾರರು ಹೇಗೆ ವಿವರಿಸಿದ್ದಾರೆ ?

2) ಕ್ಯಾಮರಾ ಕೈಗಾರಿಕೆಯಲ್ಲಿ ಜಪಾನ್‌ನ ಸಾಧನೆ ಏನು ? ವಿವರಿಸಿರಿ.

3) 'ಗಂಡ ಹೆಂಡತಿಯರ ಜಗಳ ಗಂಧ ತೀಡಿದಾಂಗ' ಎನ್ನುವುದನ್ನು 'ಮನದನ್ನೆ' ಕವನ ಹೇಗೆ ನಿರೂಪಿಸುತ್ತದೆ ? ತಿಳಿಸಿ.

4) ಸಂಗ್ರಹಣೆ, ಶೇಖರಣೆಗಿಂತ ಹಂಚಿಕೊಳ್ಳುವುದರಲ್ಲಿ ನಿಜವಾದ ಸಂತೃಪ್ತಿ ಇದೆ ಎಂಬುದು ದೀಪ್ತಿ ರಾವ್ ಅವರ ಲೇಖನದಲ್ಲಿ ಹೇಗೆ ನಿರೂಪಿತವಾಗಿದೆ ?

III. **ಒಂದರ** ಭಾವ ಸ್ವಾರಸ್ಯವನ್ನು ಬರೆಯಿರಿ : **(1×4=4)**

1) ಮುಳಿಸು ಮಾವನ ಮೇಲೆ; ಮಗಳೇನ ಮಾಡಿದಳು ?
ನಿಮಗೇತಕೀ ಕಲ್ಲು ಮನಸ್ಸು ?
ಹೋಗಿ ಬನ್ನಿರಿ, ಒಮ್ಮೆ ಕೈಮುಗಿದು ಬೇಡುವೆನು
ಅಮ್ಮನಿಗೆ ನಿಮ್ಮದೇ ಕನಸು

2) ಅಱಿಯೆನಿದಂ ನಿನ್ನಿಂದಿನ
   ತೆಱನಂ ನೀನೆನಗದೇಕೆ ಮುಳಿದಿರ್ದೆಯೊ ಮೇಣ್
   ಮಱುಮಾತುಗುಡದೆ ರವಿಸುತ
   ಮಱವಿಂದಿರ್ದಪೆಯೊ ಮೇಣ್ ಬಟಲ್ದಿರ್ದಪೆಯೋ

IV. **ಮೂರರ** ಸಂದರ್ಭ ಸ್ವಾರಸ್ಯವನ್ನು ಬರೆಯಿರಿ : **(3×4=12)**

1) ದೀಪದಲಿ ಬಿಡುಗಣ್ಣನಿರಿಸಿ
2) ಜೀವ ಸಂವಾದಕ್ಕೆ ಹಸಿದು ಬಂದೆ
3) ಕಲ್ಲೆರ್ದೆ ತನದಿಂದೆನ್ನಂತು ಬರ್ದನಾವನುಮೊಳನೇ
4) ಒಣಗಬಾರದು ಒಡಲ ಚಿಲುಮೆ
5) ಇಲ್ಲದ ಗುಣಗಳ ತರಿಸೋದು ರೊಕ್ಕ

V. **ಎರಡಕ್ಕೆ** ಟಿಪ್ಪಣಿ ಬರೆಯಿರಿ : **(2×4=8)**

1) ನಿರಂಜನ
2) ನುಡಿತಂತ್ರಾಂಶ
3) ದ.ರಾ. ಬೇಂದ್ರೆ
4) ರಾಜಪ್ಪ ದಳವಾಯಿ.

VI. **ಒಂದು** ವಾಕ್ಯದಲ್ಲಿ ಉತ್ತರಿಸಿರಿ : **(1×8=8)**

1) ರನ್ನನಿಗೆ 'ಕವಿಚಕ್ರವರ್ತಿ' ಬಿರುದನ್ನು ನೀಡಿದ ರಾಜ ಯಾರು ?
2) ನಿರಂಜನ ಅವರ ಮೊದಲ ಹೆಸರು ಯಾವುದು ?
3) 'ಹಾದಿಗಲ್ಲು' ಇದು ಯಾರ ಕೃತಿ ?
4) ಕುವೆಂಪು ಅವರ ಬದುಕು, ವ್ಯಕ್ತಿತ್ವವನ್ನು ಕುರಿತಾದ ತೇಜಸ್ವಿಯವರ ಗ್ರಂಥ ಯಾವುದು ?
5) ಬೇಂದ್ರೆಯವರು ಬರೆದ ಕಥಾಸಂಕಲನ ಯಾವುದು ?
6) ಮೇರಿ ಕ್ಯೂರಿ ಜೀವನಚರಿತ್ರೆಯ ಕುರಿತಾದ ನೇಮಿಚಂದ್ರ ಅವರ ಕೃತಿ ಯಾವುದು ?
7) ಡಾ. ರಾಜಪ್ಪ ದಳವಾಯಿ ಯಾವ ರೀತಿಯ ನಾಟಕಗಳ ರಚನೆಗೆ ಪ್ರಸಿದ್ಧರು ?
8) ಬ್ಯಾರಿ ಭಾಷೆಯ ಪ್ರಪ್ರಥಮ ಅಂತರ್ಜಾಲ ಪತ್ರಿಕೆ ಯಾವುದು ?